

ಮುಟ್ಟಿನ ಸಮಯದಲ್ಲಿ ಬಳಸುವ ತಾವೇ ತಯಾರಿಸಿದ ಪರಿಸರಸ್ನೇಹಿ ಬಟ್ಟೆಯ ಪ್ಯಾಡ್‌ಗಳೊಂದಿಗೆ ವಂಟೂರಿನ ಮಹಿಳೆಯರು

# ಮುಟ್ಟಿನ ಪ್ಯಾಡ್‌ಗಳಿಗೆ ಪರಿಸರ ಸ್ನೇಹಿ ಸ್ಪರ್ಶ

## ವಂಟೂರಿನ ಮಹಿಳೆಯರ ಪರಿಸರ ಕಾಳಜಿ

**ಹೆಣ್ಣುಮಕ್ಕಳು ಮುಟ್ಟಿನ ಸಂದರ್ಭದಲ್ಲಿ ಬಳಸುವ ಪ್ಯಾಡ್ ತ್ಯಾಜ್ಯಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಚಿಕ್ಕಬಳ್ಳಾಪುರ ಜಿಲ್ಲೆಯ ವಂಟೂರಿನ ಮಹಿಳೆಯರು ಪರಿಸರಸ್ನೇಹಿ ಪ್ಯಾಡ್‌ಗಳ ತಯಾರಿಕೆ ಆರಂಭಿಸುವ ಮೂಲಕ, ಸ್ವಾವಲಂಬನೆಯ ಜೊತೆಗೆ ಪರಿಸರ ಕಾಳಜಿಯನ್ನೂ ಸಾಧಿಸಿದ್ದಾರೆ.**

■ ಡಿ.ಜಿ. ಮಲ್ಲಿಕಾರ್ಜುನ

ಪ್ರವಾಹದಿಂದ ನಲುಗಿದ್ದ ಕೊಡಗು ಮತ್ತು ಉತ್ತರಕರ್ನಾಟಕದಲ್ಲಿ ‘ಗುಟ್ಟಿನಿಂದ ಬಟ್ಟಲೆಡೆಗೆ ದಿಟ್ಟ ನಡಿಗೆ’ ಅಭಿಯಾನ ನಡೆಯಿತು. ಪ್ರವಾಹ ಸಂತ್ರಸ್ತ ಮಹಿಳೆಯರಿಗೆ ಹಲವು ಸ್ವಯಂ ಸೇವಕ ತಂಡಗಳು ಮುಟ್ಟಿನ ಬಟ್ಟಲು ಹಂಚಿಕೆ ಮಾಡಿದವು. ಈ ಅಭಿಯಾನದ ಕುರಿತು ಎಲ್ಲೆಡೆ ಚರ್ಚೆ, ಫೇಸ್‌ಬುಕ್, ಟ್ವಿಟರ್‌ನಲ್ಲಿ ವ್ಯಾಪಕ ಪ್ರಚಾರ ಕೂಡ ನಡೆಯಿತು. ಸ್ಯಾನಿಟರಿ ಪ್ಯಾಡ್‌ಗಳನ್ನು ಉಪಯೋಗಿಸಿ ಸರಿಯಾದ ಕ್ರಮದಲ್ಲಿ ವಿಲೇವಾರಿ ಆಗದಿದ್ದಲ್ಲಿ ಸಾಂಕ್ರಾಮಿಕ ಕಾಯಿಲೆ ಹರಡುವ ಭೀತಿ, ಇದರಿಂದ ಪರಿಸರಕ್ಕೆ ಆಗುವ ತೊಂದರೆಗಳಿಂದ ಮುಕ್ತಿ ಪಡೆಯಲು ಪರ್ಯಾಯ ಮಾರ್ಗಗಳ ಬಗ್ಗೆ ಆ ಅಭಿಯಾನ ಚರ್ಚೆ ಹುಟ್ಟುಹಾಕಿತು. ಅದರ ಪರಿಣಾಮವೆಂಬಂತೆ ಮುಟ್ಟಿನ ಸಮಯದಲ್ಲಿ ಬಳಸುವ ಪರಿಸರಸ್ನೇಹಿ ಬಟ್ಟೆಯ ಪ್ಯಾಡ್ ಬಳಕೆ ಮತ್ತು ಮುಟ್ಟಿನ ಬಟ್ಟಲು ಬಳಸುವುದನ್ನು ಅನೇಕರು ಪ್ರಾರಂಭಿಸಿದ್ದಾರೆ.

ಪರಿಸರ ಮತ್ತು ಹೆಣ್ಣಿನ ಕಾಳಜಿಯ ಮಾರ್ಗದರ್ಶನದಿಂದ ಹೊತ್ತಿಕೊಂಡ ಸಣ್ಣ ದೀಪವು ನಾನೂ ಅರಿವಿನ ಬೆಳಕನ್ನು ನೀಡಬಲ್ಲೆ ಎಂಬಂತೆ ಸದ್ದಿಲ್ಲದೇ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ವಂಟೂರಿನಲ್ಲಿ ಬೆಳಗಲು ಪ್ರಾರಂಭಿಸಿದೆ. ವಂಟೂರು ಗ್ರಾಮದ ನಾಲ್ವರು ಮಹಿಳೆಯರು ಮುಟ್ಟಿನ ಸಮಯದಲ್ಲಿ ಬಳಸುವ ಪರಿಸರಸ್ನೇಹಿ ಬಟ್ಟೆಯ ಪ್ಯಾಡ್‌ಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ವಂಟೂರಿನ ಪವಿತ್ರ, ಕಮಲಮ್ಮ, ಕವಿತಾ ಮತ್ತು ಚೈತ್ರ ಎಂಬ ನಾಲ್ವರು ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ ಲಕ್ಷ್ಮೀದೇವಮ್ಮ ಅವರ ಮಾರ್ಗದರ್ಶನದಲ್ಲಿ ಸ್ವತಃ ಬಂಡವಾಳ ಹೂಡಿ ಕಳೆದ ಆರು ತಿಂಗಳಿನಿಂದ ಪರಿಸರಸ್ನೇಹಿ ಮರುಬಳಕೆಯ ಬಟ್ಟೆಯ ಪ್ಯಾಡ್‌ಗಳನ್ನು ತಯಾರಿಸುತ್ತಿದ್ದಾರೆ. ಇದಕ್ಕಾಗಿ ‘ಸ್ತ್ರೀಶಕ್ತಿ’ ಸಂಘದಲ್ಲಿ 57 ಸಾವಿರ ರೂಪಾಯಿ ಸಾಲ